**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.**

**ಓ.ಎಸ್.ನಂ. 90/2013.**

ಡಿ **ಡಬ್ಲ್ಯೂಃ 1**

**ದಿನಾಂಕಃ 28-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಬಿ.ಜಿ.ಆರ್. ವಕೀಲರಿಂದಃ**

ಈಗ ನನಗೆ ತೋರಿಸಿತ್ತಿರುವ ಮೃತ್ಯು ಪತ್ರವನ್ನು ಗೇಮಪ್ಪ ರಾಮಪ್ಪ ಲಮಾಣಿ ಯವರು ದ್ಯಾಮಪ್ಪ ಗೇಮಪ್ಪ ಲಮಾಣಿ ರವರಿಗೆ ಮಾಡಿಕೊಟ್ಟಿರುತ್ತಾರೆ. ಸದರಿ ಮೃತ್ಯುಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಡಿ-33 ಎಂದು ಗುರುತಿಸಲಾಯಿತು. ಸಾಕ್ಷಿ ನಿಡಿ-33 ರ ಮೇಲಿರುವ ದಸ್ತುರು ಸಹಿಯಾದ ಬಿ.ಸಿ.ಪಾಟೀಲ ಎಂದು ಇರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸದರಿ ನಿಡಿ-33 ರ ಮೇಲೆ ಗೇಮಪ್ಪ ರಾಮಪ್ಪ ಲಮಾಣಿ ತನ್ನ ಹೆಬ್ಬಿಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಿಡಿ-33 ರ ಮೇಲೆ ಮರಿಯಪ್ಪ ಮಾಳಗಿ ಎಂಬ ಮಾಜಿ ಶಾಸಕರು ಸಹ ಸಹಿ ಮಾಡಿರುತ್ತಾರೆ. ಸದರಿ ನಿಡಿ-33 ರ ಮೇಲೆ ಹನುಮಂತಪ್ಪ ಈರಪ್ಪ ಲಮಾಣಿ ರವರು ಸಹ ಸಹಿ ಮಾಡಿರುತ್ತಾರೆ. ಸದರಿ ನಿಡಿ-33 ಗೇಮಪ್ಪರವರ ಟ್ರಂಕಿನಿಂದ ತೆಗೆದಿರುತ್ತಾರೆ. ಸದರಿ ನಿಡಿ-33 ಟ್ರಂಕ್ ನಲ್ಲಿ ಸಿಕ್ಕಾಗ ಗೇಮಪ್ಪ ರಾಮಪ್ಪ ಲಮಾಣಿ ಜೀವಂತ ಇರಲಿಲ್ಲ. ಸದರಿ ನಿಡಿ-33 ವಾಟ್ನಿ ಮಾಡುವ ಕಾಲಕ್ಕೆ ಸಿಕ್ಕಿರುತ್ತದೆ.

ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.